ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 2, May-June 2025, Pp. 110-113
Bi-Monthly, Peer-Reviewed, Open Access, Indexed Journal

**I S S N: 2583-3510**
**SIRDF**
**JOURNALS**
editor@srujani.in
www.srujani.in

# ಮಹಿಳೆಯರ ಆರೋಗ್ಯ : ಲಿಂಗ ಸಮಾನತೆ ಮತ್ತು ಪೌಷ್ಟಿಕತೆಯ ಮಹತ್ವ

**ಡಾ. ಟಿ. ಅಕ್ಕಮ್ಮ**
ಅತಿಥಿ ಉಪನ್ಯಾಸಕರು, ಮಹಿಳಾ ಅಧ್ಯಯನ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ, ವಿಶ್ವವಿದ್ಯಾಲಯ, ಬಳ್ಳಾರಿ

**Abstract:**
*ಮಹಿಳೆಯರ ಆರೋಗ್ಯವೆಂದರೆ ಕೇವಲ ದೈಹಿಕ ಸ್ವಾಸ್ಥ್ಯ ಮಾತ್ರವಲ್ಲ ಬದಲಾಗಿ ಮಾನಸಿಕ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳ ಸಮತೋಲನವೂ ಕೂಡ ಆಗಿದೆ. ಲಿಂಗ ಸಮಾನತೆ ಮತ್ತು ಪೌಷ್ಟಿಕತೆ ಮಹಿಳೆಯರ ಆರೋಗ್ಯದ ಮೇಲೆ ಮಹತ್ವದ ಪರಿಣಾಮ ಬೀರುತ್ತದೆ. ಸಮಾನತೆಯ ಕೊರತೆಯಿಂದಾಗಿ ಅವರ ಆರೋಗ್ಯ ಪೌಷ್ಟಿಕತೆ ಶಿಕ್ಷಣ ಮತ್ತು ಆರ್ಥಿಕ ಸ್ವಾಯತ್ತತೆಯಲ್ಲಿ ಅಡ್ಡಿಗಳು ದಿನನಿತ್ಯ ಎದುರಾಗುತ್ತಿದೆ. ಪೌಷ್ಟಿಕ ಆಹಾರವು ಮಹಿಳೆಯರ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ರೂಪಿಸುತ್ತದೆ ಆದರೆ ಸಮಾಜದಲ್ಲಿ ಬೇರೂರಿರುವ ಸಾಂಪ್ರದಾಯಿಕ ಸಾಮಾಜಿಕ ಸಾಂಸ್ಕೃತಿಕ ಮೂಢನಂಬಿಕೆಯ ಅಂಶಗಳ ಕಾರಣದಿಂದ ಪೌಷ್ಟಿಕ ಆಹಾರವನ್ನು ತೆಗೆದುಕೊಳ್ಳಲು ಅನೇಕ ನಿರ್ಬಂಧನೆ ಮತ್ತು ತಾರತಮ್ಯದ ಕಾರಣ ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.*

**Keywords:** *ಮಹಿಳೆ, ಲಿಂಗ ಸಮಾನತೆ, ಆರೋಗ್ಯ, ಅಪೌಷ್ಟಿಕತೆ.*

## ಪೀಠಿಕೆ

ಜೈವಿಕ ಮತ್ತು ಲಿಂಗ ಸಂಬಂಧಿ ವ್ಯತ್ಯಾಸದ ಪರಿಣಾಮವಾಗಿ ಮಹಿಳೆಯರ ಆರೋಗ್ಯದ ಮೇಲೆ ಗಮನಾರ್ಹ ಪರಿಣಾಮ ಬೀರುತ್ತದೆ. ಸಮಾಜದಲ್ಲಿ ಬೇರೂರಿರುವ ಸಾಮಾಜಿಕ ಸಾಂಸ್ಕೃತಿಕ ಮತ್ತು ನಂಬಿಕೆ ಮೂಢನಂಬಿಕೆಯ ಅಂಶಗಳ ಕಾರಣದಿಂದ ಪೌಷ್ಟಿಕ ಆಹಾರವನ್ನು ತೆಗೆದುಕೊಳ್ಳುಲು ಅನೇಕ 'ೀಕ ನಿರ್ಬಂಧನೆ ಅಥವಾ ತಾರತಮ್ಯದ ಕಾರಣ ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಸ್ತ್ರೀಯಾದವಳು ದಪ್ಪವಿದ್ದರೂ ಕಷ್ಟ, ಸಣ್ಣಗಿದ್ದರೂ ಕಷ್ಟ, ಕುಳ್ಳಗೆ ಇದ್ದರೂ, ಎತ್ತರವಿದ್ದರೂ, ಕಪ್ಪಿದ್ದರೂ ಸಮಾಜಕ್ಕೆ ಒಂದು ರೀತಿಯಲ್ಲಿ ಅವಳಿಗೆ ಮೂದಲಿಸುತ್ತಾ ಅವಳನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ನಿಯಂತ್ರಿಸಲು ಪುರುಷ ಪ್ರಧಾನ ವ್ಯವಸ್ಥೆ ಬಂಧನವನ್ನು ಹೇರುತ್ತಲೆ ಇರುತ್ತದೆ. ಪುರುಷ ಪ್ರಧಾನ ವಿಚಾರಗಳು ಕೇವಲ ಪುರುಷ ಹೇಳಿದರಷ್ಟೆ ಅಲ್ಲ, ಅಲ್ಲಿ ಮಹಿಳೆಯ ಮಾತು ಮತ್ತು ವಿಚಾರದಲ್ಲಿಯೂ ಪುರುಷ ಮೌಲ್ಯಗಳು ಸಮಾಜದಲ್ಲಿ ಹೆಮ್ಮರವಾಗಿ ಬೆಳೆದು ತಲೆತಲಾಂತರದಿಂದ ಮುಂದುವರೆಯುತ್ತಾ ಬಂದಿವೆ. ಅದನ್ನೆ ಮುಂದುವರೆಸಿಕೊಂಡು ಹೋಗುತ್ತಿವೆ. ಹೀಗಾಗಿ ಹೆಣ್ಣಿಗೆ ತಾಯಿಯಾದವಳು, ಅತ್ತೆಯಾದವಳು ಪೌಷ್ಟಿಕ ಆಹಾರವನ್ನು ತೆಗೆದುಕೊಳ್ಳುವಾಗ ನೋಡಿ ಕೊಡುತ್ತಾಳೆ. ಹುಡುಗ ತಿಂದು ಗಟ್ಟಿಮುಟ್ಟಾಗಿ ಇರಲಿ ಎಂದರೆ ಹೆಣ್ಣು ನಯ

***Please cite this article as:*** ಅಕ್ಕಮ್ಮ, ಟಿ. (2025). ಮಹಿಳೆಯರ ಆರೋಗ್ಯ : ಲಿಂಗ ಸಮಾನತೆ ಮತ್ತು ಪೌಷ್ಟಿಕತೆಯ ಮಹತ್ವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(2), 110–113

ನಾಜೂಕಾಗಿ ತಳ್ಳಗೆ ಬೆಳ್ಳಗೆ ಇರಲಿ ಹೆಚ್ಚು ತಿಂದು ದಪ್ಪಗಾದರೆ ಮುಂದೆ ಮದುವೆಗೆ ವರ ಒಪ್ಪಿಕೊಳ್ಳಬೇಕಲ್ಲ ಎಂಬ ಯೋಚನೆ. ಇಂತಹ ಯೋಚನೆಗಳು ಮಹಿಳೆಗೆ ಬೇಕಾದಂತಹ ಪೌಷ್ಟಿಕ ಆಹಾರ ಪಡೆಯುವಲ್ಲಿ ಕೊರತೆಯುಂಟಾಗುತ್ತದೆ.

ಇನ್ನೂ ಗೃಹಿಣಿಯರು ಬೆಳಿಗ್ಗೆ ಎದ್ದಾಗಿನಿಂದ ಮನೆ ಕೆಲಸ, ಮಕ್ಕಳ ಶಾಲೆ, ಗಂಡನ ಕೆಲಸಕ್ಕೆ ಅಡುಗೆ ಬುತ್ತಿ ಅಂತ ಕೆಲಸ ಮಾಡುತ್ತಾ 12 ಗಂಟೆಗೆ ಉಪಹಾರ ಸೇವಿಸಿ, ಇಲ್ಲಾ ಬೆಳಿಗ್ಗೆಯಿಂದ 3–4 ಬಾರಿ ಚಹಾ ಸೇವಿಸಿ ಉಳಿದ ಬಳಿದ ರಾತ್ರಿಯ ಆಹಾರ ತಿನ್ನುವ ಮೂಲಕ ದೇಹಕ್ಕೆ ಪೌಷ್ಟಿಕ ಆಹಾರ ಕೊರತೆಯಿಂದ ಶಕ್ತಿಹೀನತೆಯಿಂದ ಬಳಲುತ್ತಾರೆ. ಇನ್ನೂ ಬಡತನ ಅನುಭವಿಸುವ ಮಹಿಳೆಯರಿಗೆ ದುಡಿದ ಹಣ ಗಂಡಂದಿರ ಕುಡಿತಕ್ಕೆ ಸಾಲುವುದಿಲ್ಲ. ಮಕ್ಕಳ ಊಟಕ್ಕೂ ದಿನನಿತ್ಯದ ಕೂಲಿ ಸಾಕಾಗದೆ ಅವರು ಉಪವಾಸವಿರುವ ಕಾರಣ ಅವರಿಗೆ ಆರೋಗ್ಯದ ಸಮಸ್ಯೆಗಳು ಕಾಡುತ್ತದೆ. ಸರಿಯಾದ ಪೋಷಕಾಂಶವಿಲ್ಲದೆ ಅನಿಮಿಯಾ ಕಾಮಾಲೆ, ಹೊಟ್ಟೆಗೆ ಸಂಬಂಧಿತ ರೋಗಗಳು ಚರ್ಮ ರೋಗಗಳು ಮುಂತಾದವುಗಳನ್ನು ಅನುಭವಿಸಿದರೆ ಮಧ್ಯಮ ವರ್ಗದ ಮಹಿಳೆಯರು ಆಸಿಡಿಟಿ, ರಕ್ತದೊತ್ತಡ, ಕಡಿಮೆ ರಕ್ತದೊತ್ತಡ ಅಪೌಷ್ಟಿಕತೆ ಇಂತಹ ಅನೇಕ ಕಾಯಿಲೆಗಳು ಗೃಹಿಣಿಯರು ಅನುಭವಿಸುವ ಜೊತೆಗೆ ಬಸಿರು ಬಾಣಂತನದ ಕಾರಣ ಬೆನ್ನು ನೋವು ಮೂಳೆ ಸವೆತೆ ಮಂಡಿ ನೋವು ಹಲ್ಲುಗಳ ಸಮಸ್ಯೆ ಇವು ಚಿಕ್ಕ ರೋಗಗಳೆನಿಸಿದರೂ, ನಗುವಿಗೆ ಕಾರಣವಾದರೂ ಚಿಕ್ಕ ಚಿಕ್ಕ ಸಮಸ್ಯೆಗಳು ಸಾಯುವವರೆಗೆ ಕೊರಗು ಮತ್ತು ನೋವನ್ನು ಅನುಭವಿಸುವಂತೆ ಮಾಡುತ್ತದೆ. ಮಹಿಳೆಯರಿಗೆ ಸರಿಯಾದ ಪೋಷಣೆಯ ಆಹಾರ ಸಿಗದ ಕಾರಣ ಪ್ರಪಂಚದಾದ್ಯಂತ ತಾಯಿ ಮತ್ತು ಶಿಶು ಮರಣಗಳು ಹೆಚ್ಚು ಸಂಭವಿಸುತ್ತವೆ. ಅದರಲ್ಲಿ ಬಡತನ ಅನುಭವಿಸುವ ದೇಶಗಳಲ್ಲಿ ಇದರ ಪ್ರಮಾಣ ಅತೀ ಹೆಚ್ಚಿದೆ. 2024ರಲ್ಲಿ 9.91 ಲಕ್ಷ ಜನನಗಳಲ್ಲಿ 5.52 ಲಕ್ಷ ಶಿಶು ಮರಣದ ನೋಂದಣಿಯಾಗಿದೆ ಇಲ್ಲಿ ಜನನಕ್ಕಿಂತ ಮರಣ ಹೆಚ್ಚು ಕಂಡುಬಂದಿದೆ. 2025 ರಲ್ಲಿ ಶಿಶುಮರಣ ಪ್ರಮಾಣ 1000 ಮಕ್ಕಳ ಜನನದಲ್ಲಿ 24.979 ರಷ್ಟು ಮಕ್ಕಳ ಮರಣ ಸಂಭವಿಸುತ್ತಿದೆ ಹಾಗೂ 3.08% ಗೆ ಕಡಿಮೆಯಾಗಿದೆ ಎಂದು ಭಾರತದ ಶಿಶುಮರಣ ವರದಿ ತಿಳಿಸುತ್ತದೆ.

"ಅಪೌಷ್ಟಿಕತೆಯಿಂದಾಗಿ ಉಂಟಾಗುವ ಭ್ರೂಣದ ಮಂದ ಬೆಳವಣಿಗೆಯು ಶಿಶು ಮರಣಕ್ಕೆ ಮುಖ್ಯಕಾರಣವಾಗಿದೆ. ಒಟ್ಟು ಶಿಶು ಮರಣಗಳಲ್ಲಿ 33% ರಿಂದ 34% ಪ್ರಮಾಣದಲ್ಲಿ ಉಸಿರಾಟಕ್ಕೆ ಗಾಳಿಯಲ್ಲಿನ ಆಮ್ಲಜನಕದ ಕೊರತೆ, ಅಪಘಾತ, ದೈಹಿಕ ಗಾಯಗಳಿಂದ ಗಂಡು ಶಿಶುಗಳ ಮರಣ ಪ್ರಮಾಣ 19% ಆದರೆ ಹೆಣ್ಣು ಶಿಶುಗಳು ಮರಣ ಪ್ರಮಾಣ 21% ಆಗಿದೆ. ಕರಳು ಸೋಂಕು ರೋಗಗಳು, ಕ್ಷಯ ಸಂಬಂಧಿ ರೋಗಗಳು ಮತ್ತು ಗುಣಪಡಿಸಲಾಗದ ಆರು ರೋಗಗಳಾದ ಕ್ಷಯ, ಡಿಫ್ತಿರಿಯಾ, (ನಾಯಿಕೆಮ್ಮ) ಪರ್ಟುಸಿಸ್, ಧನುರ್ವಾಯು, ಪೋಲಿಯೊ, ಮೈಲಿಟಿಸ್ ದಡಾರ"[1] ಈ ರೋಗಗಳು ಶಿಶು ಮರಣಕ್ಕೆ ಹೆಚ್ಚು ಕಾರಣವಾಗಿವೆ. 2025 ರ ವರದಿಯ ಪ್ರಕಾರ 1997 ರಿಂದ 2020 ರವರೆಗೆ 1.30 ಮಿಲಿಯನ್ ತಾಯಂದಿರ ಸಾವು ಸಂಭವಿಸಿವೆ ಎಂದು ವರದಿ ತಿಳಿಸುತ್ತದೆ.[2]

ಗರ್ಭಪಾತಗಳು ಮೇಲಿಂದ ಮೇಲೆ ಆಗುತ್ತಿರುವುದರಿಂದ ಭ್ರೂಣಕ್ಕೆ ಸೋಂಕು ತಗುಲಿ ಮಕ್ಕಳ ಮರಣಕ್ಕೆ ಕಾರಣವಾಗುತ್ತಿದೆ. ಜೊತೆಗೆ ಗರ್ಭಚೀಲದ ಸಮಸ್ಯೆಗೂ ಕಾರಣವಾಗಿದೆ. ಲೈಂಗಿಕ ಸೋಂಕುಗಳಿಂದ (ಎಸ್.ಟಿ.ಡಿ) ಶಿಶುಗಳಿಗೆ ಮತ್ತು ಮಹಿಳೆಯರಿಗೆ ಅನೇಕ ತೊಂದರೆಗಳಾಗುತ್ತಿವೆ. ಅವೈಜ್ಞಾನಿಕ ಗರ್ಭಪಾತ, ಅಪೌಷ್ಠಿಕತೆ, ಅಸುರಕ್ಷಿತ ಲೈಂಗಿಕತೆ, ಗರ್ಭಪಾತವಾದಾಗ ಸರಿಯಾದ ಚಿಕಿತ್ಸೆ

[1] ಕರ್ನಾಟಕ ಮಾನವ ಅಭಿವೃದ್ಧಿ ವರದಿ 2005 ಪು.ಸಂ. 148

[2] ವಿಜಯವಾಣಿ ದಿನ ಪತ್ರಿಕೆ 16 ಮಾರ್ಚ 2025

ಪಡೆಯದೇ ಇರುವುದು ಅನಾರೋಗ್ಯಕ್ಕೆ ಕಾರಣವಾಗಿದೆ. ಸಂತಾನೋತ್ಪತ್ತಿ ಆರೋಗ್ಯದ ಆಧುನಿಕ ಪದ್ಧತಿಗಳ ಬಗ್ಗೆ ಮಾಹಿತಿಯಿಲ್ಲ. ಆಸ್ಪತ್ರೆಯೆಂದರೆ ಖರ್ಚು ಎಂದು ಭಾವಿಸುತ್ತಾರೆ. ಸಂತಾನೋತ್ಪತ್ತಿ ಆರೋಗ್ಯಕ್ಕೆ ಹೆಚ್ಚು ಒತ್ತು ನೀಡದ ಜನರು ಯಾವುದೇ ತರಬೇತಿ, ಅರಿವು ಕಾರ್ಯಕ್ರಮಗಳಲ್ಲಿ ಭಾಗವಹಿಸದಿರುವುದಿಲ್ಲ, ಸರಕಾರ ಗರ್ಭಿಣಿ ಬಾಣಂತಿಯರಿಗಾಗಿ ಅನೇಕ ಯೋಜನೆಗಳನ್ನು ರೂಪಿಸಿದರೂ ಅವುಗಳ ಸಂಪೂರ್ಣ ಸದುಪಯೋಗ ಜನರು ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ. ಇದರಿಂದಾಗಿ ಇಂದಿಗೂ ತಾಯಿ ಮರಣ ಶಿಶುಮರಣಗಳು ಸಂಭವಿಸುತ್ತಲೆ ಇವೆ ಉದಾಹರಣೆಗೆ ಬಳ್ಳಾರಿಯಲ್ಲಿ ಆಗುತ್ತಿರುವ ತಾಯಿಮರಣಗಳು.

ಅಂಗನವಾಡಿ ಕೇಂದ್ರಗಳು ಪ್ರತಿ ಹಳ್ಳಿಯಲ್ಲಿ, ಆರೋಗ್ಯ ಕೇಂದ್ರ ಎರಡು ಹಳ್ಳಿ ನಡುವೆ ಸ್ಥಾಪಿಸಿದರೂ ಬಸುರಿ ಬಾಣಂತಿ ಮತ್ತು ಅಂಗನವಾಡಿ ಕೇಂದ್ರದಲ್ಲಿ ಪೌಷ್ಟಿಕ ಆಹಾರವನ್ನು ಕೊಡಲಾಗುತ್ತಿದೆ. ಮಾತೃಪೂರ್ಣ ಯೋಜನೆ, ಜನನಿ ಸುರಕ್ಷಾ ಯೋಜನೆ ಮಹಿಳೆಯರಿಗಾಗಿ ರೂಪಿಸಿ ಅವರ ಆರೋಗ್ಯ ಕಾಪಾಡಲು, ಹೆರಿಗೆ ಸೌಲಭ್ಯಕ್ಕಾಗಿ ಆಶಾ ಕಾರ್ಯಕರ್ತೆಯರ ನೇಮಕ ಮಾಡಿ ಗರ್ಭಿಣಿ ಬಾಣಂತಿ ಮತ್ತು ಶಿಶು ಮರಣದ ಪ್ರಮಾಣವನ್ನು ತಗ್ಗಿಸಲು ಅವರ ಸುರಕ್ಷತೆಗೆ ಯೋಜನೆಗಳನ್ನು ರೂಪಿಸಿದೆ. ಆದರೂ ತಾಯಿ ಮರಣ ಮತ್ತು ಶಿಶು ಮರಣದ ದರ ನಿರೀಕ್ಷೆಯಷ್ಟು ತಗ್ಗಿಲ್ಲ.

ಹಳ್ಳಿಗಳಲ್ಲಿ ಚಿಕ್ಕ ವಯಸ್ಸಿನಲ್ಲಿ ವಿವಾಹ ಮಾಡುವುದರಿಂದ ಮಕ್ಕಳನ್ನು ಹೆಚ್ಚಿಗೆ ಪಡೆಯುತ್ತಾರೆ ಮತ್ತು ಮಕ್ಕಳಲ್ಲಿ ಅಂತರವಿರಲಾರದೆ ವರ್ಷದಲ್ಲಿ ಒಂದರಂತೆ ಮಕ್ಕಳನ್ನು ಹೆರುವುದು, ಹೆರಿಗೆಯ ಸಂದರ್ಭದಲ್ಲಿ ಸರಿಯಾದ ಆರೈಕೆ ಇಲ್ಲದಿರುವುದು, ಗರ್ಭಪಾತಗಳಾದರೂ ವೈದ್ಯರ ಬಳಿ ತೋರಿಸದಿರುವುದು, ಹೆರಿಗೆಗಳನ್ನು ಮನೆಯಲ್ಲಿ ಮಾಡಿಕೊಳ್ಳುವುದು ಈ ಎಲ್ಲಾ ಕಾರಣಗಳ ಜೊತೆಗೆ ಪೌಷ್ಟಿಕ ಆಹಾರ ಇಲ್ಲದಿರುವುದು, ಗರ್ಭಿಣಿಯರಿಗೆ ಲಸಿಕೆ ಹಾಕಿಸದಿರುವುದು, ತಾಯಿಯ ಮತ್ತು ಶಿಶು ಮರಣಕ್ಕೆ ಕಾರಣವಾಗಿದೆ.

ಹಿಂದಿನ ಕಾಲದ ಜನರು ನೂರು ನೂರತ್ತು ವರ್ಷಗಳವರೆಗೆ ಬದುಕುತ್ತಿದ್ದರು. ಆದರೆ ಇಂದಿನ ಜನರಲ್ಲಿ ಹತ್ತು ವರ್ಷದ ಮಕ್ಕಳಿಗೆ ಬಿ.ಪಿ, ಶುಗರ್, ಕಣ್ಣಿನ ತೊಂದರೆ, ಮೂಳೆ ತೊಂದರೆ, ಶ್ವಾಶಕೋಶದ ತೊಂದರೆಗಳು ಕ್ಯಾನ್ಸರನಂತಹ ಕಾಯಿಲೆಗಳು ಸರ್ವೆಸಾಮಾನ್ಯವಾಗಿ ಬಿಟ್ಟಿದೆ. ಇವೆಕ್ಕೆಲ್ಲಾ ಕಾರಣ ವಿಷಪೋರಿತ ಆಹಾರ ಪದ್ಧತಿ ಮತ್ತು ವೈಜ್ಞಾನಿಕ ಹೆಸರಿನಲ್ಲಿ ನಡೆಯುತ್ತಿರುವ ವಿಷಪೂರಿತ ಕ್ರಿಮಿನಾಶಕಗಳ ಬಳಕೆ. ಸಾವಯುವ ಕೃಷಿಯಿಂದ ಭೂಮಿಯು ಫಲಭರಿತವಾಗಿ ಆರೋಗ್ಯಕರ ಬೆಳೆಗಳನ್ನು ಕೊಡುತ್ತಿತ್ತು. ಆದರೆ ವಿಷಕಾರಿಕ ಪಧಾರ್ಥಗಳ ಬಳಕೆಯಿಂದ ಭೂಮಿಯ ಫಲವತ್ತತ್ತೆ ಹಾಳಾಗಿ ಭೂಮಿಯ ಮೇಲ್ಪದರು ಕೂಡ ವಿಷಪೂರಿತವಾಗಿ ನಾಶವಾಗುತ್ತಿದೆ. ಇದಕ್ಕೆ ಆಧುನಿಕರಣ ಮತ್ತು ವಿಜ್ಞಾನದ ಹೆಸರಿನಲ್ಲಿ ಬಳಸುವ ವಿಷಪೂರಿತ ರಾಸಾಯನಿಕ ಪದಾರ್ಥಗಳು. ಒಂದು ರೀತಿಯಲ್ಲಿ ಪ್ರಕೃತಿ ಮತು ಮಹಿಳೆ ನಿಸರ್ಗಕ್ಕೆ ಪೂರಕಾಗಿ ಬದುಕುವಂತವರು. ವ್ಯಾಪಾರೀಕರಣ ಆಧುನೀಕರಣ ಕೈಗಾರಿಕೀಕರಣದ ಕಾರಣ, ಭೂಮಿ ನಿಸರ್ಗ ಹೇಗೆ ಮಲಿನವಾಗಿ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿದೆಯೋ...

ಅದರಂತೆ ಕೈಗಾರಿಕೀಕರಣಕ್ಕೆ ಭೂಮಿ ಮಾರಿಕೊಂಡು ಬಂದ ಹಣವನ್ನು ಗಂಡ ದುರುಪಯೋಗಿಸಿಕೊಂಡು ಕುಟುಂಬವೇ ಹಾಳಾಗುತ್ತವೆ. ಇದರಿಂದ ಕುಟುಂಬ ನಿರ್ವಹಣೆಗೆ ಮಹಿಳೆ ಅದೇ ಕೈಗಾರಿಕೆಗಳನ್ನು ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕೈಗಾರಿಕೆಗಳಿಂದಾಗುವ ಪರಿಸರ ಮಾಲಿನ್ಯದಿಂದ ಅನೇಕ ರೋಗಗಳಿಗೆ ತುತ್ತಾಗಿ ನರಳುವುದು ಮಹಿಳೆಯ ಸ್ಥಿತಿಯಾಗಿದೆ. ಇದಕ್ಕೆ ಜೀವಂತ ಉದಾಹರಣೆ ಕೊಪ್ಪಳ ಜಿಲ್ಲೆಯಲ್ಲಿ ಕೈಗಾರಿಕೆಗಳಿಂದಾಗಿ ಗಿಣಿಗೇರಾ ಕನಕಾಪುರ,

ಬಗನಾಳ ಕುಣಿಕೇರಿ ಗ್ರಾಮಗಳ ಸ್ಥಿತಿ ಉತ್ತಮ ಉದಾಹರಣೆ.

**ಪರಾಮರ್ಶನ ಗ್ರಂಥಗಳು**


- ಮೊಗಳ್ಳಿ ಗಣೇಶ. (2006). *ದಲಿತ ಕಥನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ರಂಗರಾಜ ಮನದುರ್ಗ. (2004). *ದಲಿತ ಸಂವೇದನೆ.* ಸಿ.ವಿ.ಜಿ ಪಬ್ಲಿಕೇನ್ಸ್.
- ಶ್ರೀಮತಿ. ಎಸ್. ಹೆಚ್. (2004). *ಹೆಣ್ಣು ಹೆಂಗಸು.* ಬಾಲ್ಯದಕರೆ ಪ್ರಕಾಶನ.
- ಶ್ರೀದೇವಿ, ಎಲ್. (2017). ಕುಂಚಿ ಕೊರವ ಮಹಿಳೆಯರ ಸಬಲೀಕರಣ (ಪ್ರಾಯೋಗಿಕ ಅಧ್ಯಯನ), ಪ್ರಸಾರಂಗ, ಅಕ್ಕಮಹಾದೇವಿ ಮಹಿಳಾ ವಿಶ್ವವಿದಯಾಲಯ.
- ಶ್ರೀದೇವಿ, ಎಲ್. (2022). *ಕಲಬುರಗಿ ಜಿಲ್ಲೆಯ ಬಂಜಾರ ಮಹಿಳೆಯರ ಸ್ಥಿತಿಗತಿ.* ಆನಂದಿ ಪ್ರಕಾಶನ.
- ಶೈಲಜಾ ಹಿರೇಮಠ. (2006, ಜನವರಿ–ಜೂನ್). *ಮಹಿಳಾ ಅಧ್ಯಯನ.* ಸಂಪುಟ–08.ಸಂಚಿಕೆ–1
- ವಿರೂಪಾಕ್ಷಿ ಪೂಜಾರಹಳ್ಳಿ. (2005). *ದಲಿತರು ಮತ್ತು ಚರಿತ್ರೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.